## ಅಂಕಪಟ್ಟಿಗಳ ನೈಜತೆ ಪರಿಶೀಲನೆ Verfication of Marks Card

### ಪ್ರಸ್ತುತ ಇರುವ ವ್ಯವಸ್ಥೆ

**ಎಸ್.ಎಸ್.ಎಲ್.ಸಿ. ಮೂಲಅಂಕಪಟ್ಟಿಗಳ ನೈಜತೆ ಪರಿಶೀಲನೆಗೆ ಅಗತ್ಯವಿರುವ ದಾಖಲೆಗಳ ಬಗ್ಗೆ ಮಾಹಿತಿ:**

- ದಾಖಲಾತಿ ಹಾಗೂ ನೇಮಕಾತಿ ಪ್ರಾಧಿಕಾರಿಗಳು ವಿದ್ಯಾರ್ಥಿಗಳ ಅಂಕಪಟ್ಟಿಯ ನೈಜತೆ ಪಡೆಯಬಯಸಿದಲ್ಲಿ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯೊಂದಿಗೆ ನಿಗಧಿತ ಶುಲ್ಕವನ್ನು NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಸಂಬಂದಿಸಿದ ವಿಭಾಗೀಯ ಕಛೇರಿಗೆ ಅರ್ಜಿಯನ್ನು ಸಲ್ಲಿಸಿ ಪಡೆಯಬಹುದಾಗಿದೆ.
- ಸೈನ್ಯ ಮತ್ತು ರಕ್ಷಣಾ ಪೊಲೀಸ್ ಇಲಾಖೆಗಳಿಗೆ ಶುಲ್ಕ ವಿನಾಯಿತಿ ಇದ್ದು, ಎಸ್.ಎಸ್.ಎಲ್.ಸಿ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸುವುದು ಎಲ್ಲರಿಗೂ ಕಡ್ಡಾಯವಾಗಿರುತ್ತದೆ.
- ಎಸ್.ಎಸ್.ಎಲ್.ಸಿ. ಉತ್ತೀರ್ಣಗೊಂಡ ಅಭ್ಯರ್ಥಿಯು ಪೈಲೆಟ್ ಕೋರ್ಸ್‌ನ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರಮಾಣ ಪತ್ರ ನೈಜತೆ ಪಡೆಯಲು ಇಚ್ಚಿಸುವಂತಹ ಅಭ್ಯರ್ಥಿಗಳು Office of Director General of Civil Aviation ( DGCA) New Delhi ರವರ

  Public Notice ಅನ್ನು Online ಮೂಲಕ ಪಡೆದು ಅದರಲ್ಲಿನ ಸೂಚನೆಯಂತೆ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ ಪ್ರಮಾಣ ಪತ್ರವನ್ನು ನೈಜತೆ ಪರಿಶೀಲಿಸಲು ಅಭ್ಯರ್ಥಿಯು ವ್ಯಾಸಂಗ ಮಾಡಿದ ಶಾಲಾ ಮೂಲಕ ಅರ್ಜಿಯನ್ನು ನಿಗಧಿತ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು, ಅಂತಹ ಅಭ್ಯರ್ಥಿಯ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ ಪ್ರಮಾಣ ಪತ್ರವನ್ನು ವ್ಯಾಸಂಗ ಮಾಡಿದ ಶಾಲೆಗೆ ರವಾನಿಸಲಾಗುವುದು. ನೈಜತೆ ಪರಿಶೀಲಿಸಿದ ಪ್ರಮಾಣ ಪತ್ರವನ್ನು Office of Director General of Civil Aviation ( DGCA) New Delhi ಇವರ ವಿಳಾಸಕ್ಕೆ ಕಳುಹಿಸಲಾಗುವುದು.
- ತದನಂತರ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿನ ಮಾಹಿತಿಗೂ ಮಂಡಳಿಯ ಸಂಪುಟಗಳಲ್ಲಿನ ಮಾಹಿತಿಗೂ ತಾಳೆ ಹೊಂದುತ್ತದೆಯೇ ಎಂಬುದನ್ನು ಪರಿಶೀಲಿಸಿ, ನೈಜತೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಇಲಾಖೆ / ಕಛೇರಿ / ಸಂಸ್ಥೆಗಳಿಗೆ ಕಳುಹಿಸಲಾಗುವುದು. (ಪತ್ರದ ಪ್ರತಿ ಲಗತ್ತಿಸಿದೆ)

ಕಾರ್ಯದರ್ಶಿಗಳು

ನೈಜತೆ ಪರಿಶೀಲನೆ : ಸೇವೆಗಳು

ಉಪಸೇವೆಗಳು

- ವಿದ್ಯಾರ್ಥಿಯ ಹೆಸರು, ತಂದೆಹೆಸರು, ತಾಯಿಹೆಸರು, ಜನ್ಮದಿನಾಂಕ, ನೊಂದಣಿ ಸಂಖ್ಯೆ ವರ್ಷ, ಶಾಲಾ ಸಂಕೇತ, ಶಾಲೆ ಹೆಸರು, ವಿಳಾಸ ನಮೂದಿಸತಕ್ಕದ್ದು.
- ವಿದ್ಯಾರ್ಥಿಯ ಮೊಬೈಲ್ ಸಂಖ್ಯೆನ್ನು ನಮೂದಿಸತಕ್ಕದ್ದು.
- ವಿದ್ಯಾರ್ಥಿಯ ಖಾಯಂ ವಿಳಾಸ ನಮೂದಿಸತಕ್ಕದ್ದು.
- ಉಪಸೇವೆಯಲ್ಲಿಯು ಸಹ ಸಾಮಾನ್ಯ ಅಥವಾ ತುರ್ತು ಸೇವೆ **Select** ಮಾಡಬೇಕು.

ಶುಲ್ಕ ಪಾವತಿಯ ವಿಧಾನ :

- NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಮಂಡಳಿಗೆ ಪಾವತಿಸತಕ್ಕದ್ದು ನಿಗಧಿತ ಶುಲ್ಕ ರೂ.175/- ಸಾಮಾನ್ಯ ಸೇವೆ – 30 ದಿನಗಳು ರೂ. 350/- ತುರ್ತು ಸೇವೆ – 5 ದಿನಗಳು
- ಚಲನ್ ಸಂಖ್ಯೆ, ಚಲನ್ ಪಡೆದ ದಿನಾಂಕ, ಬ್ಯಾಂಕ್‌ನ ಹೆಸರು, ಬ್ಯಾಂಕ್ ಶಾಖೆಯ ವಿವರ ನಮೂದಿಸತಕ್ಕದ್ದು.